

# ಈಗಿನ ಹುಡುಗಿಯರೇ ಹೀಗೆ!

ಸಿ.ಎನ್. ಮುಕ್ತಾ

ಡೈನಿಂಗ್ ಟೇಬಲ್ ಬಳಿ ಕುಳಿತಿದ್ದ ಗಂಡ, ಮಕ್ಕಳು, ಅತ್ತೆ, ಮಾವ ಎಲ್ಲರಿಗೂ ತಿಂಡಿ ಬಡಿಸಿದಳು ಅನುಪಮಾ.

‘ಶಾಲಿನಿ, ಅಚ್ಯುತ ಎಲ್ಲಿ?’ ಗಿರಿಜಮ್ಮ ಕೇಳಿದರು.

‘ರಾತ್ರಿ ಅಚ್ಯುತ ಬಂದಾಗ ತುಂಬಾ ಲೇಟಾಗಿತ್ತಮ್ಮ, ಮಲಗಿರಬೇಕು.’

‘ಪೂರ್ವಿ ಎಲ್ಲಿ?’

‘ಅವಳು ಇವತ್ತು ಬೇಗ ರೆಡಿಯಾಗಿ ಫ್ರೆಂಡ್ ಹುಟ್ಟಿದ ಹಬ್ಬಕ್ಕೆ ಹೋದಳು.’

ಮಕ್ಕಳು ತಿಂಡಿ ತಿಂದು ಹೊರಗೆ ಓಡಿದರು.

‘ಅತ್ತೆ–ಮಾವ ನಾನು ನಿಮ್ಮ ಹತ್ತಿರ ಒಂದು ಮುಖ್ಯವಾದ ವಿಷಯ ಹೇಳಬೇಕು.’

‘ಏನು ವಿಷಯ?’

‘ಪೂರ್ವಿಗೆ ಈ ಮದುವೆ ಇಷ್ಟವಿಲ್ಲವಂತೆ. ನೀನೇ ಈ ವಿಚಾರ ಅಪ್ಪ, ಅಮ್ಮ, ಅಶೋಕಣ್ಣಂಗೆ ತಿಳಿಸಿ ಅಂತ ಹೇಳಿ ಹೋದಳು.’

‘ಏನಾಗಿದೆ ಅವಳಿಗೆ? ಮದುವೇಂದ್ರೆ ಹುಡುಗಾಟ ಅಂದ್ಕೊಂಡಿದ್ದಾಳಾ? ಈ ವಿಚಾರ ಗೊತ್ತಾದ್ರೆ ಶಾಲಿನಿಗೆ ಬೇಜಾರಾಗಲ್ವಾ?’ ಅಶೋಕ ಹಾರಾಡಿದ.

‘ಅವಳಿಗೆ ಯಾಕೆ ಇಷ್ಟವಿಲ್ಲಾಂತ ಕೇಳೋಣ ಸುಮ್ಮನಿರು.’

‘ಅಮ್ಮಾ, ಇದು ಯಾಕೋ ಅತಿ ಆಯ್ತು. ಎರಡು ವರ್ಷದಿಂದ ಅವಳಿಗೆ ಎಷ್ಟು ಹುಡುಗರನ್ನು ನೋಡಿದ್ದೀವಿ. ನೀನೇ ಲೆಕ್ಕ ಹಾಕು. ಅವಳೇ ಪ್ರತಿ ಸಲಾನೂ ಹುಡುಗನ್ನ ಬೇಡ ಅಂದಿದ್ದಾಳೆ.’

‘ಒಬ್ಬನೇ ಮಗ ಬೇಡ. ಜವಾಬ್ದಾರಿ ಹೆಚ್ಚು, ಹೆಣ್ಣು ಮಕ್ಕಳಿರುವ ಮನೆ ಬೇಡ, ಹುಡುಗನ ಮನೆಯವರು ಸಂಪ್ರದಾಯಸ್ಥರು ನನಗೆ ಬೇಡ, ಮೂರನೇ ಹುಡುಗ ಅಂದ್ರೆ ನಾನು ಇಬ್ಬರು ಓರಗಿತ್ತಿಯರ ಕಾಟ ತಡೆಯಬೇಕು. ಒಂದಾ ಎರಡಾ?...’ ಅಶೋಕ ಗೊಣಗಿದ.

‘ಅಷ್ಟೇ ಅಲ್ಲ. ನಮ್ಮ ಶಾಮು ಮಗ ಎಂಜಿನಿಯರ್. ನೋಡಕ್ಕೂ ಚೆನ್ನಾಗಿದ್ದಾನೆ. ಬಿಳಿ ಜಿರಳೆ ತರಹ ಇದ್ದಾನೆ’ ಅಂದುಬಿಟ್ಟಳು. ಸುಬ್ಬರಾಯರು ತಾವೂ ದೂರಿದರು.

‘ಅತ್ತೆ ನೀವೇ ಹೇಳಿ. ಶಾಲಿನಿ ತಮ್ಮ ಶಶಾಂಕ್ ಚೆನ್ನಾಗಿಲ್ವಾ? ಡಾಕ್ಟರ್, ಹಸ್ತಗುಣ ಚೆನ್ನಾಗಿದೆ. ತುಂಬಾ ತಾಳ್ಮೆ ಇರುವ ವ್ಯಕ್ತಿ. ಇವಳು ಸಂತೋಷದಿಂದ ಎಂಗೇಜ್ಮೆಂಟ್ ಮಾಡಿಕೊಂಡಳು ತಾನೆ? ಈಗ ಬೇಡಾಂದ್ರೆ ಹೇಗೆ? ಅನುಪಮಾ ಕೇಳಿದಳು.

ಗಿರಿಜಮ್ಮ ಉತ್ತರ ಕೊಡಲಿಲ್ಲ.

‘ಅಮ್ಮನ್ನ ಏನು ಕೇಳ್ತೀಯಾ? ಅಮ್ಮ–ಅಪ್ಪನಿಂದಲೇ ಅವಳು ಹಾಳಾಗಿರೋದು. ಒಬ್ಬಳೇ ಮಗಳೂಂತ ತಲೆ ಮೇಲೆ ಕೂರಿಸಿಕೊಂಡಿದ್ದಾರೆ. ಅವಳು ತಪ್ಪು ಮಾಡಿದಾಗ ತಿದ್ದಿದ್ದಿದ್ರೆ ಅವಳು ಯಾಕೆ ಹೀಗಿರ್ತಿದ್ದಳು?’ ಅಶೋಕ ಮತ್ತೆ ಕೂಗಾಡಿದ.

‘ಇದರಲ್ಲಿ ನನ್ನ ತಪ್ಪೇನು ಇಲ್ಲಪ್ಪ’ ಸುಬ್ಬರಾಯರು ಹೇಳಿದರು.

‘ನಿಮಗೆ ಅಮ್ಮ ಮಾತಾಡಕ್ಕೆ ಸ್ವಾತಂತ್ರ್ಯಾನೇ ಕೊಟ್ಟಿಲ್ಲ. ನೀವು ಏನು ಮಾಡಕ್ಕೆ ಸಾಧ್ಯ? ಹೆಂಡತಿ ಹೇಳಿದ ಹಾಗೆ ಕೇಳ್ತಾ, ಮಗಳನ್ನು ಹೋದ ದಾರಿಗೆ ಬಿಟ್ಟಿದ್ದೀರಲ್ಲ, ಅದೇ ನೀವು ಮಾಡಿರುವ ತಪ್ಪು.’

ಸುಬ್ಬರಾಯರು ಗಿರಿಜಮ್ಮನ ಮುಖ ನೋಡಿದರು.

‘ಅಮ್ಮ, ಪೂರ್ವಿ ಈ ಮದುವೆಗೆ ಒಪ್ಪಲೇಬೇಕು. ಒಂದು ವೇಳೆ ನೀವು ಈ ಮದುವೆ ಕ್ಯಾನ್ಸಲ್ ಮಾಡಿದರೆ, ನಾನು ಇನ್ನು ಮುಂದೆ ಅವಳ ಮದುವೆ ವಿಚಾರಕ್ಕೆ ಪ್ರವೇಶಿಸಲ್ಲ. ನನಗೂ ಇಬ್ಬರು ಹೆಣ್ಣುಮಕ್ಕಳಿದ್ದಾರೆ. ಈ ವಾತಾವರಣದಲ್ಲಿ ಬೆಳೆದರೆ ಅವರು ಪೂರ್ವಿ ತರಹವೇ ಆಗ್ತಾರೆ. ನಾನು ಬೇರೆ ಮನೆಗೆ ಹೋಗ್ತೀನಿ.’

‘ಹಾಗೆಲ್ಲಾ ಅನ್ನಬೇಡ ಅಶೋಕ. ನಾನು ಪೂರ್ವಿಗೆ ಬುದ್ಧಿ ಹೇಳ್ತೀನಿ.’

‘ಈ ವಿಚಾರ ಶಾಲಿನಿ–ಅಚ್ಯುತ ಇಬ್ಬರಿಗೂ ಗೊತ್ತಾಗಬಾರದು. ಹುಷಾರಾಗಿರಿ.’

ಶಾಲಿನಿ–ಅಚ್ಯುತ ಎದ್ದು ಬಂದಾಗ ಒಂಬತ್ತು ಗಂಟೆಯಾಗಿತ್ತು. ಸ್ನಾನ, ತಿಂಡಿ ಆದ ಮೇಲೆ ಅಚ್ಯುತ ಹೇಳಿದ. ‘ನಾನು, ಶಾಲಿನಿ ನನ್ನ ಫ್ರೆಂಡ್ ಮದುವೆಗೆ ಬೆಂಗಳೂರಿಗೆ ಹೊರಟಿದ್ದೇವೆ. ಸೋಮವಾರ ಮದುವೆ ಮುಗಿಸಿಕೊಂಡು ಹಾಗೇ ದಾವಣಗೆರೆಗೆ ಹೋಗ್ತೀನಿ. ಶಾಲಿನಿ ಇಲ್ಲಿಗೆ ಬರ್ತಾಳೆ.’

‘ಹೋಗಿ ಬಾಪ್ಪ. ಎರಡು ದಿನ ರಜ ಹಾಕಿದ್ದಿದ್ರೆ ಶಾಲಿನೀನ್ನ ಕರೆದುಕೊಂಡು ಬೇರೆ ಎಲ್ಲಿಗಾದರೂ ಹೋಗಬಹುದಿತ್ತು’ ಅಶೋಕ ಹೇಳಿದ.

‘ಮಾರ್ಚ್ ತಿಂಗಳಲ್ವಾ, ಕೆಲಸ ಜಾಸ್ತಿ. ರಜ ಸಿಗಲ್ಲ’ ಎಂದ ಅಚ್ಯುತ.

ಮಧ್ಯಾಹ್ನ ಊಟ ಮಾಡಿಕೊಂಡು ಅಚ್ಯುತ–